157ನೇ

83

4PR
09641

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ ಇವರು ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ.

**ನಿಯಮ-72 ರಡಿಯಲ್ಲಿ ಗಮನ ಸೆಳೆಯುವ ಸೂಚನೆ:-**

ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನ ಅರ್ಜಿಯ ಪರಿಶೀಲನೆಯ ಸಂದರ್ಭದಲ್ಲಿ ನೈಜ ಕಟ್ಟಡ ಕಾರ್ಮಿಕರಾಗಿದ್ದರೂ ಸಹ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಪರಿಶೀಲಿಸುವ ತಂತ್ರಾಂಶಗಳಿಂದ ಬೇರೆ ವೃತ್ತಿ ಕಂಡು ಬರುವ ಕಾರ್ಮಿಕರ ಮಕ್ಕಳ ಅರ್ಜಿಗಳನ್ನು ಅತಾರ್ತಿಕವಾಗಿ ತಿರಸ್ಕೃತಗೊಳಿಸುವುತ್ತಿರುವುದರಿಂದ ಹಲವಾರು ನೈಜ ಕಟ್ಟಡ ಕಾರ್ಮಿಕರು ಮಕ್ಕಳು ಸದರಿ ಸೌಲಭ್ಯ ಪಡೆಯುವುದರಿಂದ ವಂಚಿತರಾಗುತ್ತಿದ್ದಾರೆ.

ಮಂಡಳಿ ಪರಿಶೀಲಿಸುವ ತಂತ್ರಾಂಶಗಳಲ್ಲಿ ಅನ್ಯ ವೃತ್ತಿ ಕಂಡು ಬರುವ ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನದ ಅರ್ಜಿಯನ್ನು ಕಲ್ಯಾಣ ಮಂಡಳಿಯ ಹಂತದಲ್ಲಿ ತಡೆಹಿಡಿದು ತಾಲ್ಲೂಕುವಾರು ಕಾರ್ಮಿಕ ಇಲಾಖಾ ಕಛೇರಿಗಳಿಗೆ ವಾಪಸ್ ಕಳುಹಿಸಿ ಕೂಲಂಕುಶವಾಗಿ ಮರು ಪರಿಶೀಲನೆ ಮಾಡಲು ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಹಾಗೂ ಅಗತ್ಯ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಬೀರ ಸಮಸ್ಯೆ ಕುರಿತು ಮಾನ್ಯ ಕಾರ್ಮಿಕ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಉತ್ತರ:-**

ಕಟ್ಟಡ ಮತ್ತು ಇತರೆ ನಿರ್ಮಾಣ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಫಲಾನುಭವಿಗಳಿಗೆ ಹಲವಾರು ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿ ಮಾಡಲಾಗುತ್ತಿದೆ. ಇಂತಹ ಯೋಜನೆಗಳಲ್ಲಿ ಫಲಾನುಭವಿಗಳ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಶೈಕ್ಷಣಿಕ ಧನಸಹಾಯವು ಕೂಡ ಒಳಗೊಂಡಿರುತ್ತದೆ.

ಮಂಡಳಿಯಿಂದ ನೀಡಲಾಗುತ್ತಿರುವ ಶೈಕ್ಷಣಿಕ ಧನಸಹಾಯವನ್ನು ಇ-ಆಡಳಿತ ಇಲಾಖೆಯ ಎಸ್.ಎಸ್.ಪಿ. ತಂತ್ರಾಂಶದ ಮೂಲಕ ನೀಡಲಾಗುತ್ತಿದೆ. ಹೀಗೆ ತಂತ್ರಾಂಶದಲ್ಲಿ ಶೈಕ್ಷಣಿಕ ಧನಸಹಾಯಕ್ಕಾಗಿ ಫಲಾನುಭವಿಗಳು ಸಲ್ಲಿಸಿದ ಅರ್ಜಿಯನ್ನು ಮಂಡಳಿಗೆ ಕಳುಹಿಸಲಾಗುತ್ತಿದ್ದು, ಅವರಿಗೆ ಅರ್ಹ ಶೈಕ್ಷಣಿಕ ಧನಸಹಾಯದ ಮೊತ್ತವನ್ನು ಬಿಡುಗಡೆ ಮಾಡುವ ಪೂರ್ವದಲ್ಲಿ ಮಂಡಳಿಯಲ್ಲಿ ಪರಿಶೀಲನೆಯನ್ನು ನಡೆಸಲಾಗುತ್ತದೆ. ಹೀಗೆ ಪರಿಶೀಲನೆ ನಡೆಸುವಾಗ ಕರ್ನಾಟಕ ಸರ್ಕಾರ ನಿರ್ವಹಿಸುತ್ತಿರುವ ಕುಟುಂಬ ತಂತ್ರಾಂಶದಲ್ಲಿ ಫಲಾನುಭವಿಗಳು ನಮೂದಿಸಿರುವ ವಿವರಗಳನ್ನು ಕೂಡ ತಾಳೆ ಮಾಡಿ ನೋಡುವುದು ಪರಿಶೀಲನೆಯ ಒಂದು ಭಾಗವಾಗಿರುತ್ತದೆ.

ಮಂಡಳಿಯ ಫಲಾನುಭವಿಗಳ ವಿವರಗಳನ್ನು ಹೀಗೆ ಕುಟುಂಬ ತಂತ್ರಾಂಶದೊಂದಿಗೆ ಪರಿಶೀಲನೆ ನಡೆಸಿದಾಗ ಹಲವಾರು ಫಲಾನುಭವಿಗಳು ಬೇರೆ ಬೇರೆ ವೃತ್ತಿಗಳನ್ನು ನಮೂದಿಸಿರುವುದು ಕಂಡುಬಂದಿರುತ್ತದೆ. ಈ ವಿವರಗಳನ್ನು ಸ್ವತಃ ಫಲಾನುಭವಿಗಳೇ ಸರ್ಕಾರದಿಂದ ಬೇರೆ ಬೇರೆ ಸೌಲಭ್ಯಗಳನ್ನು ಪಡೆಯಲು ನಮೂದಿಸಿದ ವಿವರಗಳಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಕುಟುಂಬ ತಂತ್ರಾಂಶದಲ್ಲಿ ಫಲಾನುಭವಿಗಳು ಕಟ್ಟಡ ಕಾರ್ಮಿಕರು ಬೇರೆ ಯಾವುದೇ ವೃತ್ತಿಯನ್ನು ನಮೂದಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. ಫಲಾನುಭವಿಗಳು ಕಟ್ಟಡ ಕಾರ್ಮಿಕರ ವೃತ್ತಿಯನ್ನು ಮಾತ್ರ ಕುಟುಂಬ ತಂತ್ರಾಂಶದಲ್ಲಿ ನಮೂದಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪುರಸ್ಕರಿಸಿ ಅವರ ಖಾತೆಗೆ ಮೊತ್ತವನ್ನು DBT ಮೂಲಕ ನೇರವಾಗಿ ವರ್ಗಾವಣೆ ಮಾಡಲಾಗುತ್ತಿದೆ. ಆದರೆ, ಫಲಾನುಭವಿಗಳು ಕಟ್ಟಡ ಕಾರ್ಮಿಕ ವೃತ್ತಿಯೊಂದಿಗೆ ಇತರೆ ವೃತ್ತಿಗಳು ಅಂದರೆ ರೈತರು ಕೂಲಿ ಕಾರ್ಮಿಕ ನರೇಗಾ ಎಂದು ನಮೂದಿಸಿದ್ದಲ್ಲಿ ಮಾತ್ರ ಕಾರ್ಮಿಕ ಇಲಾಖೆಯ ಕ್ಷೇತ್ರಮಟ್ಟದ ಅಧಿಕಾರಿಗಳಿಂದ ಸೂಕ್ತ ಪರಿಶೀಲನೆಯನ್ನು ನಡೆಸಿ ಅರ್ಹ ಫಲಾನುಭವಿಗಳಿಗೆ ಶೈಕ್ಷಣಿಕ ಧನಸಹಾಯದ ಮೊತ್ತವನ್ನು ವರ್ಗಾವಣೆ ಮಾಡಲಾಗುತ್ತಿದೆ.

ಮಂಡಳಿಯ ಎಲ್ಲಾ ಯೋಜನೆಗಳು ಅರ್ಹ ಮತ್ತು ನೈಜ ಫಲಾನುಭವಿಗಳಿಗೆ ಮಾತ್ರ ದೊರೆಯಬೇಕು ಎನ್ನುವ ಕಾರಣಕ್ಕಾಗಿ ವಿವಿಧ ಹಂತದಲ್ಲಿ ಪರಿಶೀಲನೆಯನ್ನು ನಡೆಸಲಾಗುತ್ತಿದೆ.

**ಕಾಇ 497 ಎಲ್ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**